**ಪತ್ರಿಕಾ ಪ್ರಕಟಣೆ**

**ಪ್ರತೀಕ್ಷಾ ವಿದ್ಯಾರ್ಥಿ ವೇತನಕ್ಕಾಗಿ ಎಚ್ಎಲ್ಎಲ್ ಅರ್ಜಿಗಳನ್ನು ಆಹ್ವಾನಿಸುತ್ತಿದೆ.**

**ಬೆಳಗಾವಿ, ಅಕ್ಟೋಬರ್** 15: ಶೈಕ್ಷಣಿಕ ವರ್ಷ 2016-17 ರಲ್ಲಿ ವೃತ್ತಿಪರ ಹಾಗು ತಾಂತ್ರಿಕ ಶಿಕ್ಷಣದಲ್ಲಿ ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಂದ **ಎಚ್ಎಲ್ಎಲ್** ಲೈಫ್ ಕೇರ್ ಲಿಮಿಟೆಡ್ ನ ಪ್ರತೀಕ್ಷಾ ಚಾರಿಟಬಲ್ ಸೊಸೈಟಿ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿದೆ. ಪ್ರತೀಕ್ಷಾ ಚಾರಿಟಬಲ್ ಸೊಸೈಟಿ ಯು **ಬಿಪಿಎಲ್** ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗಾಗಿ **ಎಚ್ಎಲ್ಎಲ್ ಸಿ.ಎಸ್.ಆರ್**ನ ಮೊದಲ ಹೆಜ್ಜೆಯಾಗಿದೆ.

ಈ ಯೋಜನೆಯು ಬೆಳಗಾವಿ ಜಿಲ್ಲೆಯ **ಖಾಯಂ ನಿವಾಸಿ** ವಿದ್ಯಾರ್ಥಿಗಳಿಗಾಗಿದ್ದು, ಕರ್ನಾಟಕ ರಾಜ್ಯದ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಓದುತ್ತಿರುವವರಿಗೆ ತೆರೆದಿರುತ್ತದೆ. ಇಂಜಿನಿಯರಿಂಗ್,ಮೆಡಿಕಲ್,ಬಿ ಫಾರ್ಮ,ಡಿಪ್ಲೋಮಾ,ನರ್ಸಿಂಗ್ ಮತ್ತು **ಐಟಿಐ** ಶಿಕ್ಷಣ ಪಡೆಯುತ್ತಿರುವವರಿಗೆ ಆರ್ಥಿಕ ನೆರವನ್ನು ನೀಡುತ್ತದೆ.

ಆಯ್ದ ಐದು ಮೆಡಿಕಲ್ (MBBS) ವಿದ್ಯಾರ್ಥಿಗಳಿಗೆ ತಲಾ ವಾರ್ಷಿಕ ರೂ. 30,000/- ನೆರವು, ಇಂಜಿನಿಯರಿಂಗ್ ಮತ್ತು ಬಿ ಫಾರ್ಮ ವಿದ್ಯಾರ್ಥಿಗಳಿಗೆ ರೂ. 20,000/- ಡಿಪ್ಲೊಮಾ ಮತ್ತು ನರ್ಸಿಂಗ್ ವಿದ್ಯಾರ್ಥಿಗಳಿಗೆ ತಲಾ ರೂ,10,000/- **ಮತ್ತು ಐಟಿಐ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.** 5,000/- ನೆರವು ನೀಡಲಾಗುವುದು. **ಈ ನೆರವನ್ನು ವಿದ್ಯಾರ್ಥಿಗಳು** ಶಿಕ್ಷಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವವರೆಗೂ ಪಡೆಯುವರು.

2015 ನೇ ವರ್ಷದಲ್ಲಿ ರೂ. 7.85 ಲಕ್ಷದ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳಿಗೆ ನೀಡಲಾಗಿದೆ. ಕಳೆದ ವರ್ಷ ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳಲ್ಲದೆ 30 **ಹೊಸ** ವಿದ್ಯಾರ್ಥಿಗಳಿಗೆ ಪ್ರಸ್ತುತ ವರ್ಷ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು.

ಶೈಕ್ಷಣಿಕ ಪ್ರತಿಭೆ ಹಾಗು ಆರ್ಥಿಕ ಹಿನ್ನೆಲೆಯ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆರಿಸಲಾಗುವುದು. ಆಸಕ್ತಿಯುಳ್ಳ ವಿದ್ಯಾರ್ಥಿಗಳು ವಿದ್ಯಾರ್ಥಿ ಪ್ರಮಾಣ ಪತ್ರದೊಂದಿಗೆ ಸಂಬಂಧಪಟ್ಟ ಅಧಿಕಾರಿಯಿಂದ ಮೂಲ ವರಮಾನ ಪತ್ರವನ್ನು ನೀಡಬೇಕಾಗುತ್ತದೆ. ವಿದ್ಯಾರ್ಥಿ ವೇತನಕ್ಕಾಗಿ ಆಯ್ದ ಅಭ್ಯರ್ಥಿಗಳು ಯೋಜನೆಯಲ್ಲಿ ಮುಂದುವರೆಯ ಬಯಸಿದಲ್ಲಿ ಅವರ ವಾರ್ಷಿಕ ಶೈಕ್ಷಣಿಕ ವರದಿಯನ್ನು ಸಲ್ಲಿಸಬೇಕಾಗುತ್ತದೆ.

ನೌಕರರ ಕೊಡುಗೆ ಹಾಗು ಕಂಪನಿಯ **ಸಿ.ಎಸ್.ಆರ್** ನಿಧಿಯಿಂದ ಪ್ರತೀಕ್ಷಾ ಚಾರಿಟಬಲ್ ಸೊಸೈಟಿಗೆ ನಿಧಿಯನ್ನು **ಕ್ರೋಡಿಕರಿಸಲಾಗುವುದು.**

**ಎಚ್ಎಲ್ಎಲ್** ಲೈಫ್ ಕೇರ್ ಲಿಮಿಟೆಡ್ ನ ಕಚೇರಿಯಲ್ಲಿ ಅರ್ಜಿಗಳು ಲಭ್ಯವಿರುತ್ತದೆ ಹಾಗು www.lifecarehll.com ನಿಂದ ಸಹಾ ಡೌನ್ಲೋಡ್ ಮಾಡಬಹುದು. ಡೆಪ್ಯುಟಿ ಜನರಲ್ ಮ್ಯಾನೇಜರ್ **(ಮಾ.ಸಂ.)**, **ಎಚ್ಎಲ್ಎಲ್** ಲೈಫ್ ಕೇರ್ ಲಿಮಿಟೆಡ್, ಕಣಗಾಲ್ ಫ್ಯಾಕ್ಟರಿ,ಬೆಳಗಾವಿ, ಕರ್ನಾಟಕ - 591225 ನ ಕಚೇರಿಗೆ ಅರ್ಜಿಗಳು ನವೆಂಬರ್ 10 2016 **ರ ಒಳಗಾಗಿ** ತಲುಪಬೇಕಾಗುತ್ತದೆ.